### ನನ್ನಂಥವರ ಅನುಭವವೂ ಹೌದು

‘ನಮ್ಮೂರ ಟಾಕೀಸು ಮತ್ತು ಕನ್ನಡ’ (ನ. 16, ಸಂತೆಬೆನ್ನೂರು ಫೈಜ್ನಟ್ರಾಜ್), ಹಳ್ಳಿಗಳಲ್ಲಿ ಬೆಳೆದ ನನ್ನಂಥವರ ಅನುಭವದ ಪಡಿಯಚ್ಚು. ನಾನೂ ‘ಸಾಬರಗನ್ನಡ’ ಕೇಳಿ ನಕ್ಕು ಗೇಲಿ ಮಾಡಿದವನೇ.

—ಶೃಂಗೇರಿ ಲೋಕೇಶ್, ಬೆಂಗಳೂರು

### ಮಕ್ಕಳಿಗೆ ವಿಶೇಷ ಕೊಡುಗೆ

ಮಕ್ಕಳ ದಿನಾಚರಣೆಯ ನಿಮಿತ್ತ ವಿಶೇಷ ಕೊಡುಗೆಯಂತೆ ಮಕ್ಕಳ ಹಲವು ಕವಿತೆಗಳನ್ನು ಪ್ರಕಟಿಸಿದ್ದು ಸಮಯೋಚಿತವಾಗಿದೆ. ಹಲವು ಪ್ರಚಲಿತ ನೀತಿಕಥೆಗಳನ್ನು ಕವಿತೆಯಾಗಿ ಪ್ರಸ್ತುತಪಡಿಸಿದ್ದು ಬಹಳ ಆಪ್ತವೆನಿಸಿತು. ಗೇಯತೆಯ ಗುಣವನ್ನು ಹೊಂದಿದ ಈ ಕವಿತೆಗಳು ಮಕ್ಕಳಿಗೆ ತುಂಬಾ ಇಷ್ಟವಾಗುವಂಥವು. ಕವಿತೆಗಳ ಜೊತೆ ಪ್ರಕಟಗೊಂಡ ಚಿತ್ರಗಳು ಕೂಡ ತುಂಬಾ ಸೊಗಸಾಗಿವೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

### ಅಪರೂಪದ ಕಥೆ



‘ಮುಳ್ಳುಹಂದಿಯ ಹೆಜ್ಜೆಗಳು’ (ನ. 16, ಗೋಪಾಲ್ ಪೆರಾಜೆ) ಕಥೆ ಬಹಳ ಇಷ್ಟವಾಯಿತು. ಒಂದು ಉತ್ತಮ ಸಂದೇಶವನ್ನು ಒಳಗೊಂಡ ಅಪರೂಪದ ಕಥೆ. ಪ್ರಾಣಿಗಳೆಡೆಗಿನ ಕಾಳಜಿ ಕಥೆಯಲ್ಲಿ ಹಾಸುಹೊಕ್ಕಾದ ರೀತಿ ಬಹಳ ಹಿಡಿಸಿತು.

—ಅಶೋಕ್, ಬೆಂಗಳೂರು

### ಭೇಷ್ ವಿಹಾನ್!

ವಾಹ್! ವಿಹಾನ್... (ನ. 16, ರಾಘವೇಂದ್ರ ಕೆ.) ಚಿತ್ರಪಟ ಕಥನದಲ್ಲಿ, ಐದನೇ ತರಗತಿಯ ಪೋರ ವಿಹಾನ್ ತೆಗೆದ ಛಾಯಾಚಿತ್ರಕ್ಕೆ ‘ವರ್ಷದ ವನ್ಯಜೀವಿ ಛಾಯಾಗ್ರಾಹಕ’ ಬಹುಮಾನ ಸಂದ ಸಂಗತಿ ಓದಿ ಖುಷಿಯಾಯಿತು. ಇಷ್ಟು ಸಣ್ಣ ವಯಸ್ಸಿನಲ್ಲೇ ಕ್ಯಾಮೆರಾಗೆ ಆಕರ್ಷಿತನಾಗಿರುವ ವಿಹಾನ್ ಭವಿಷ್ಯ ಉಜ್ವಲವಾಗಲಿ. ಬಾಲ್ಯದಲ್ಲಿ ಮೊಬೈಲ್ ಫೋನಿನ ಚಟ ಹತ್ತಿಸಿಕೊಂಡು ಕಿಶೋರಾವಸ್ಥೆಯ ಅವಕಾಶಗಳಿಂದ ವಂಚಿತರಾಗುತ್ತಿರುವ ಇಂದಿನ ಬಾಲಕರಿಗೆ ವಿಹಾನ್ ಆದರ್ಶವಾಗಬೇಕು.

—ರಾಮಚಂದ್ರ ಎಂ.ಆರ್., ಬೆಂಗಳೂರು





### ಚಪ್ಪಾಳೆ ತಟ್ಟುವ ಕೈ ನಮ್ಮದಾಗಲಿ

‘ಬದುಕ ಪ್ರೀತಿಸು ಜೀವವೆ’ (ನ. 16, ಮಂಜುಶ್ರೀ ಎಂ. ಕಡಕೋಳ) ಮುಖಪುಟ ಲೇಖನ ಮಂಗಳಮುಖಿಯರೆಡೆಗೆ ಸಮಾಜದ ದೃಷ್ಟಿಕೋನ ಬದಲಾಗಲೇಬೇಕಾದ ಅಗತ್ಯವನ್ನು ಒತ್ತಿಹೇಳುತ್ತಿದೆ.

ಬದುಕು ಕೊಟ್ಟ ಸಾವಿರ ಸವಾಲುಗಳನ್ನು ಮೆಟ್ಟಿನಿಂತು ತಮ್ಮದೇ ಸಾಧನೆಯ ಹಾದಿ ರೂಪಿಸಿಕೊಂಡ ಲಿಂಗತ್ವ ಅಲ್ಪಸಂಖ್ಯಾತರ ಉದಾಹರಣೆಗಳು ಸಮಾಜದಲ್ಲಿ ಇನ್ನುಳಿದವರಿಗೂ ಪ್ರೇರಣೆಯಂತಿವೆ. ಸಮಾಜದಿಂದ ತಿರಸ್ಕೃತರಾದರೂ ಸಮಾಜದಲ್ಲಿ ಒಂದಾಗಿ, ಸಮಾಜದ ಒಳಿತಿಗಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಮಂಗಳಮುಖಿಯರನ್ನು ಕಂಡು ಹೆಮ್ಮೆ ಮೂಡಿತು. ಅವರನ್ನು ನಿಂದಿಸುವ, ಹಂಗಿಸುವ, ಅವರ ಕೆಲಸವನ್ನು ಕೀಳಾಗಿ ಕಾಣುವ ನಾವು, ಅವರಿಗೆ ಉತ್ತಮವಾಗಿ ಬದುಕುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಅವರ ಸಾಧನೆಗಳಿಗೆ ಚಪ್ಪಾಳೆ ತಟ್ಟುವ, ಸಹಾಯ ಮಾಡುವ ಕೈಗಳು ನಮ್ಮದಾಗಬೇಕು.

—ವೈಷ್ಣವಿ ಎಂ.ಆರ್., ಮೈಸೂರು

### ಸಮಾಜ ಅವಕಾಶ ಕಲ್ಪಿಸಲಿ

ಅವಕಾಶ ಕೊಟ್ಟರೆ ಕೆಲಸ ಮಾಡಲು ಮಂಗಳಮುಖಿಯರು ಸಮರ್ಥರು ಎಂಬುದನ್ನು ಈ ಲೇಖನ ಸಾಕ್ಷೀಕರಿಸಿತು. ಅವರನ್ನು ನಡೆಸಿಕೊಳ್ಳುವ ರೀತಿಯನ್ನು ಸಮಾಜ ಬದಲಿಸಿಕೊಳ್ಳಬೇಕಿದೆ.

—ಎಚ್.ಎನ್. ನಾಗಮೋಹನ ದಾಸ್

### ಗೌರವದ ಬದುಕು ಎಲ್ಲರ ಹಕ್ಕು

‘ಬದುಕ ಪ್ರೀತಿಸು ಜೀವವೇ...’ ಶೀರ್ಷಿಕೆಯೇ ಭಾವನಾತ್ಮಕವಾಗಿದೆ. ಲೇಖನದಲ್ಲಿ ಮಂಗಳಮುಖಿಯರ ಸಾಧನೆಯ ಕಥೆಗಳನ್ನು ಓದಿ ಮನಸ್ಸು ಆರ್ದ್ರವಾಯಿತು.

ಸೃಷ್ಟಿಯಲ್ಲಿನ ಈ ಅಸಮತೋಲನಕ್ಕೆ ಸವಾಲಾಗಿ ಬದುಕು ಕಟ್ಟಿಕೊಂಡ ಲಿಂಗತ್ವ ಅಲ್ಪಸಂಖ್ಯಾತರ ಕುರಿತು ಓದಿ ಸಂತಸವಾಯಿತು. ಗೌರವಯುತ ಜೀವನ ನಡೆಸುವ ಹಕ್ಕು ಎಲ್ಲರಿಗೂ ಇದೆ ಎಂಬುದನ್ನು ಈ ಸಮಾಜ ತಿಳಿದುಕೊಳ್ಳಬೇಕಿದೆ.

—ಮನೋಜ್ ಕುಮಾರ್ ಎಸ್., ಹಾಸನ

### ಸಾಧನೆಗೂ ಸೈ

ಮಂಗಳಮುಖಿಯರೆಂದರೆ ಟ್ರಾಫಿಕ್ ಸಿಗ್ನಲ್/ರೈಲ್ವೆ/ಬಸ್ಸು ನಿಲ್ದಾಣಗಳಲ್ಲಿ ಭಿಕ್ಷೆ ಬೇಡುವುದಷ್ಟೇ ಅಲ್ಲ, ಸಾಧನೆಗೂ ಸೈ ಎಂಬುದನ್ನು ಹತ್ತಾರು ಮಂಗಳಮುಖಿಯರ ಯಶೋಗಾಥೆ ಮನಮುಟ್ಟುವಂತೆ ಹೇಳಿದೆ. ಅವರ ಬಗ್ಗೆ ಅಭಿಮಾನ, ಗೌರವ ಹೆಚ್ಚಿದೆ. ಅವರು ಸ್ವಾವಲಂಬಿಗಳಾಗಲು ಸಮಾಜವೂ ಕೈಜೋಡಿಸಬೇಕು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

### ಮಾತಿನ ಚಾಟಿ

‘ಕುಂಭಕರ್ಣನಿಗಿಂತಲೂ ನಾವೇ ಗ್ರೇಟು’ (ನ. 09, ಲತಾ ಹೆಗಡೆ) ಹಾಸ್ಯಲೇಖನ ತುಂಬಾ ಸ್ವಾರಸ್ಯವಾಗಿದೆ. ಈಗ ಅಚ್ಚ ಕನ್ನಡದಲ್ಲಿ ಮಾತನಾಡಿದರೆ ಯಾರಿಗೂ ತಿಳಿಯುವುದಿಲ್ಲ. ಮಾತನಾಡುವುದು ಕೂಡ ದುಸ್ಸಾಧ್ಯವೇ ಆಗಿರುವಂಥ ಕಾಲವಿದು. ಈ ಸಂಗತಿಗಳನ್ನು ಬಹಳ ರಸವತ್ತಾಗಿ, ಹಾಸ್ಯದ ಮೂಲಕ ಹೇಳಿ, ಕನ್ನಡಿಗರಿಗೊಂದು ಚಾಟಿ ಬೀಸಿದಂತಿದೆ ಲೇಖನ.

ನಮ್ಮ ಕನ್ನಡ ಭಾಷಾಪ್ರೇಮ ನವೆಂಬರ್ ತಿಂಗಳಿನಲ್ಲಿ ಮಾತ್ರ. ನನಗೆ ಕುಂಭಕರ್ಣನೇ ಗ್ರೇಟ್, ಯಾಕೆ ಹೇಳಿ, ಆರು ತಿಂಗಳು ಮಾತ್ರ ಅವನ ನಿದ್ರೆ, ನಮ್ಮದು ಹನ್ನೊಂದು ತಿಂಗಳು... ಅವನು ಶಾಪಗ್ರಸ್ತ, ಆದರೆ ನಮಗೇನಾಗಿದೆ?.

—ಪ್ರಕಾಶ ನಡಹಳ್ಳಿ

### ಹೊಸತನದ ‘ಹೊಸ ಬೆಳಗು’





ಎನ್. ಶೈಲಜಾ ಹಾಸನ ಅವರ ‘ಹೊಸ ಬೆಳಗು’ ಧಾರಾವಾಹಿ ಚೆನ್ನಾಗಿ ಮೂಡಿಬರುತ್ತಿದೆ. ವಿಶಿಷ್ಟ ಕಥೆಗೆ ತಕ್ಕಂತೆ ಮೋನಪ್ಪ ಅವರ ಕುಂಚದಲ್ಲಿ ಅರಳುವ ಚಿತ್ರಗಳು ಜೀವತುಂಬುತ್ತಿವೆ. ಚಿತ್ರಗಳನ್ನೇ ಕಣ್ತುಂಬಿಸಿಕೊಳ್ಳುವಂತೆ ಮಾಡುತ್ತಿವೆ.

—ಸಿ. ಸರಳಾಮಣಿ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in